ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 22.01.2025.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಆರ್.ಜೆ.ಪಿ. ವಕೀಲರಿಂದಃ

ಸಾಕ್ಷಿಗೆ ಒಂದು ಛಾಯಚಿತ್ರ ತೋರಿಸುತಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಡಿ-1** ಎಂದು ಗುರುತಿಸಲಾಯಿತು. ನಿಡಿ-1ರ ಮೇಲೆ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ನಿಡಿ-1ರ ಮನೆಗೆ ಎರಡು ಗೇಟ್‌ಗಳು ಬೇರೆ-ಬೇರೆಯಾಗಿವೆ ಎಂದರೆ ಸರಿ. ನಿಡಿ-1ರ ಮನೆ ಆರ್‌ಸಿಸಿ ಕಟ್ಟಡ ಎಂದರೆ ಸರಿ. ನಿಡಿ-1ರ ಮನೆ ಕಟ್ಟಿ ಸುಮಾರು 40 ವರ್ಷವಾಗಿರುತ್ತದೆ. ನಿಡಿ-1ರ ಕಟ್ಟಡ ಕಟ್ಟುವಾಗ ಅದರ ಅಸ್ತಿತ್ವ ಹಾಗೇ ಇತ್ತು. ನಿಡಿ-1ರ ಮನೆ ಅಂದಾಜು ಈಗಿನ ಮೌಲ್ಯ ಸುಮಾರು ರೂ.50 ಲಕ್ಷ ಇರುತ್ತದೆ. ಸಾಕ್ಷಿ ವಾದ ಪತ್ರದ 2ನೇ ಪುಟದಲ್ಲಿ ತಮ್ಮ ಸಹಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ಒಂದು ದೃಢಿಕೃತ ನಕಲಿನ ಪ್ರಮಾಣ ತೋರಿಸುತಿದ್ದು ಅದರಲ್ಲಿ ತಮ್ಮ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು **ನಿಡಿ-2** ಎಂದು, ಸಾಕ್ಷಿ ಸಹಿಯನ್ನು **ನಿಡಿ-2(ಎ)** ಎಂದು ಗುರುತಿಸಲಾಯಿತು. ನಿಡಿ-2ಕ್ಕೆ ನನ್ನ ಎಲ್ಲ ಸಹೋದರರು ಸಹಿ ಮಾಡಿರುತ್ತಾರೆ ಎಂದರೆ ಸರಿ.

ನಿಡಿ-2ರ ಸಂಗತಿಗಳನ್ನು ಸಾಕ್ಷಿಗೆ ಓದಿ ಹೇಳಲಾಗಿ ಅವುಗಳು ತಪ್ಪು ಇರುತ್ತವೆ ಎಂದು ನುಡಿಯುತ್ತಾರೆ. ನಿಡಿ-2ರಂತೆ ಪುರಸಭೆ ಆಳಂದ ರವರಿಗೆ ನಾನು ಪ್ರಮಾಣ ಪತ್ರ ಅರ್ಜಿ ಸಲ್ಲಿಸಿ, ಪ್ರತಿವಾದಿಗೆ ದಾವಾ ಸ್ವತ್ತುನ್ನು ನಿಡಿ-2ರಂತೆ ವರ್ಗಾವಣೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-2ರಂತೆ ಪ್ರತಿವಾದಿ ಹೆಸರಿನಲ್ಲಿ ದಾವಾ ಸ್ವತ್ತು 2004ರಲ್ಲಿಯೇ ದಾಖಲಾಗಿದೆ ಎಂದರೆ ಸರಿಯಲ್ಲ. ಆವಾಗಿನಿಂದ ಪ್ರತಿವಾದಿಯೇ ದಾವಾ ಸ್ವತ್ತಿನ ತೆರಿಗೆಯನ್ನು ಕುಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಹೆಸರಿನಲ್ಲಿ ದಾವಾ ಸ್ವತ್ತು ದಾಖಲಾಗಿದ್ದು, ನನಗೆ ಸುಮಾರು 1 ವರ್ಷದ ಒಳಗೆ ಗೊತ್ತಾಗಿರುತ್ತದೆ. ಪ್ರತಿವಾದಿ ಹೆಸರಿನಲ್ಲಿ ದಾವಾ ಸ್ವತ್ತು ದಾಖಲಾದ ನಂತರ ಅದರ ವಿರುದ್ಧ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ, ಆದರೆ ನ್ಯಾಯಾಲಯಕ್ಕೆ ಈ ದಾವೆ ಸಲ್ಲಿಸಿರುತ್ತೇನೆ.

1995ರ ಯುಗಾದಿಯಂದು ನನ್ನ ಹಾಗೂ ನನ್ನ ಅಣ್ಣ-ತಮ್ಮಂದಿರ ಮಧ್ಯ ಮೌಖಿಕವಾಗಿ ವಿಭಾಗವಾಗಿದೆ ಎಂದರೆ ಸರಿಯಲ್ಲ. ಸದರಿ ಮೌಖಿಕ ವಾಟ್ನಿಯಲ್ಲಿ ಪ್ರತಿವಾದಿಗೆ ಯಾವುದೇ ನೌಕರಿ ಇಲ್ಲದೇ ಇರುವ ಕಾರಣ, ದಾವಾ ಸ್ವತ್ತುನ್ನು ಸಂಪೂರ್ಣವಾಗಿ ಆತನಿಗೆ ಬಿಟ್ಟು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಆ ಪ್ರಕಾರ ನಾವು ಎಲ್ಲ ಅಣ್ಣ-ತಮ್ಮಂದಿರು ಪುರಸಭೆಗೆ ಹೋಗಿ ನಿಡಿ-2ರಂತೆ ಪ್ರಮಾಣ ಪತ್ರ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾವೆಲ್ಲ ಪ್ರಮಾಣ ಪತ್ರ ಕೊಟ್ಟ ನಂತರ ನಮ್ಮ ಸಮ್ಮತಿ ಮೇರೆಗೆ ಪ್ರತಿವಾದಿ ಹೆಸರು ದಾಖಲಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿ ತನ್ನ ಹೆಸರಿನಲ್ಲಿ ದಾವಾ ಸ್ವತ್ತು ದಾಖಲಾದ ನಂತರ ನವಿಕರಣ ಸಲುವಾಗಿ ಸುಮಾರು ರೂ.10 ಲಕ್ಷ ಖರ್ಚು ಮಾಡಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಮಗ ಮಾಡಿದಂತಹ ಎಲ್ಲ ಸಾಲಗಳಿಗೆ ಪ್ರತಿವಾದಿಯೇ ಜಾಮೀನುದಾರನ ಆಗಿದ್ದು, ಆ ಕಾರಣ ಪ್ರತಿವಾದಿಯೇ ಸದರಿ ಸಾಲಗಳನ್ನು ಮರು ಪಾರವತಿ ಮಾಡಿರುತ್ತಾನೆ ಎಂದರೆ ಸರಿಯಲ್ಲ.

ಸದರಿ ಮರು ಪಾವತಿ ಮಾಡಿದಂತಹ ಸಾಲವನ್ನು ಪ್ರತಿವಾದಿ ಈಗ ಕೇಳುತ್ತಿದ್ದರಿಂದ, ನಾನು ಕ್ರಯ ಪತ್ರ ನನ್ನ ಹೆಸರಿಲ್ಲಿರುವ ಕಾರಣ ಅದರ ದುರುಪಯೋಗ ಪಡೆದುಕೊಂಡು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ-ತಾಯಿಗಳು ಇಬ್ಬರು ಕೂಡಾ ನಿಡಿ-1ರ ಮನೆಯಲ್ಲಿಯೇ ತಿರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-1ರ ಮನೆ ನನ್ನ ಸ್ವಂತ ಗಳಿಸಿದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ನಾನು ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ನನ್ನ ಹೆಸರಿನಲ್ಲಿ ತೋರಿಕೆಗೆ ಖರೀದಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಮತ್ತು ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**